

**ಒಂದು ಬಕೆಟ್ಟಿನಲ್ಲಿ ಸಮುದ್ರ**
ಇಂಗ್ಲಿಷ್ ಮೂಲ:
ಆವೇಹಿ ಅಬಾಕಸ್
ಕಥೆ
ಕನ್ನಡಕ್ಕೆ:ಕಿರಣ್ ಭಟ್
ಪುಟ: 24
ಬೆಲೆ: ರೂ. 100




**ಅಮ್ಮ ಮತ್ತು ನಾನು**
ಇಂಗ್ಲಿಷ್ ಮೂಲ:
ಮಮತ ನೈನಿ,
ಸಂಕೇತ್ ಪೇಟ್ಕರ್,
ಕನ್ನಡಕ್ಕೆ: ಕುಸುಮ ಪಟೇಲ್
ಪುಟ: 36, ಬೆಲೆ: ರೂ.130




**ಡಾ. ಬಿ.ಆರ್. ಅಂಬೇಡ್ಕರ್**
(ಮಕ್ಕಳಿಗಾಗಿ ಚಿತ್ರ ಪುಸ್ತಕ)
ಚಿತ್ರಕಥನ: ಗುಜ್ಜಾರ್, ಸಂ: ಶ್ರೀಜಾ ವಿ.ಎನ್.
ಪುಟ:16, ಬೆಲೆ: ರೂ. 100

**ಎಲ್ಲ ಪುಸ್ತಕಗಳ ಪ್ರಕಟಣೆ: ಬಹುರೂಪಿ, ಬೆಂಗಳೂರು, ಮೊಬೈಲ್ :** 7019182729

ಜೋಪಾನವಾಗಿ ತಂದು ಅಪ್ಪನಿಗೆ ಕೊಡುವ ಕಥೆ, ಪ್ರೀತಿಯ ಒರತೆ ಚಿಮ್ಮುವಂತೆ ಮಾಡುತ್ತದೆ. ('ಮೀನು ಸಾರು', ಲೇ: ರಿಚಾ ಝಾ ಮತ್ತು ಸುಮಂತ ದೇ; ಕನ್ನಡಕ್ಕೆ: ನಾಗಮಣಿ ಎಸ್.ಎನ್.).

ಇನ್ನೊಂದು ಗಮನಾರ್ಹ ಕಥೆ 'ಅದಿಲ್ ಮಾತನಾಡಿದರೆ ಪದಗಳು ಕುಣಿಯುತ್ತವೆ' (ಲೇ: ಲಾವಣ್ಯ ಕಾರ್ತಿಕ್, ಕನ್ನಡಕ್ಕೆ: ಗಿರೀಶ್ ಜಕಾಪುರೆ). ಕೈಬೆರಳುಗಳ ಸಹಾಯದಿಂದ ಮಾತನಾಡುವ ಆದಿಲ್ ಹೇಳುವ ಕಥೆಯು ಮಕ್ಕಳ ಮನದಲ್ಲಿ 'ಅರ್ಥ ಮಾಡಿಕೊಳ್ಳುವ ಮನೋಭಾವ' ಬೆಳೆಯುವಂತೆ ಮಾಡುತ್ತದೆ. ಈ ಎರಡೂ ಕಥೆಗಳಲ್ಲಿ ಗೋಪು ಮತ್ತು ಅದಿಲ್ ಎಲ್ಲರಂತೆ ಎಲ್ಲರೊಡನೆ ಬೆರೆಯುವ ಧೋರಣೆಯೇ ಪ್ರಧಾನವಾಗಿದೆ.

ಒಮ್ಮೆ ನಾಡಿನ ಅರಸನಿಗೆ ತನ್ನ ಆನೆ, 'ಅಪ್ಪುಕುಟ್ಟ'ನ ತೂಕ ಎಷ್ಟಿರಬಹುದು ಎಂಬ ಪ್ರಶ್ನೆ ಮೂಡುತ್ತದೆ. ರಾಜನ ಪ್ರಶ್ನೆಗೆ ಉತ್ತರಿಸಲು ಜನರು ಸಜ್ಜಾಗುತ್ತಾರೆ. ಆನೆಯನ್ನು ತೂಗಲು ತಕ್ಕಡಿಗಳನ್ನು ತರುತ್ತಾರೆ. ಆದರೆ ತಕ್ಕಡಿಗಳು ಎಷ್ಟೇ ದೊಡ್ಡದು ಎಂದು ಜನರಿಗೆ ಅನಿಸಿದರೂ, ಆನೆಯನ್ನು ತೂಗಲು ಚಿಕ್ಕದಾಗಿ, ಕೊನೆಗೆ ಮುರಿದೇ ಹೋಗುತ್ತದೆ. ಬಾಲಕಿ ಮೀನೂಗೆ ಆನೆ ತೂಕ ಮಾಡಲು ಬಹಳ ಸರಳ ಉಪಾಯವೊಂದು ಹೊಳೆಯುತ್ತದೆ. ನಾಟಕೀಯವಾಗಿ ಓದುವ ಶೈಲಿಯಲ್ಲಿಯೇ ಈ ಕಥೆಯ ಸ್ವಾರಸ್ಯ ಹೆಚ್ಚುವುದು. ಅಭಿನಯಕ್ಕೆ ಪೂರಕವಾಗಿ ರಚನೆಯಾಗಿರುವ ಕಥೆಯು ಮಕ್ಕಳ ಕಲ್ಪನಾ ಲೋಕವನ್ನು ವಿಸ್ತರಿಸಬಲ್ಲುದು. (ಲೇ: ಇಂದು ಹರಿಕುಮಾರ್, ಕನ್ನಡಕ್ಕೆ: ಅನಿತಾ ಪ್ರಿಯಾರಿಣಿ ಕಲ್ಲೆ)

ಈ ಮಾಲಿಕೆಯ ಪುಸ್ತಕಗಳು ಓದುವ ಸುಖದಲ್ಲಷ್ಟೇ ಕೊನೆಗೊಳ್ಳುವುದಿಲ್ಲ. ನೀತಿ ಬೋಧನೆಯಲ್ಲೇ ಸುತ್ತಿ ಸುಳಿಯುವುದಿಲ್ಲ. ಜೀವನ ಕೌಶಲಗಳನ್ನು ಪ್ರತಿಫಲಿಸುತ್ತವೆ. ಮಕ್ಕಳ ಹಕ್ಕುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಹೊಸ ವಿಷಯಗಳನ್ನು ತಿಳಿಯಲು, ಕುತೂಹಲ ಬೆಳೆಸಲು ಕಾರಣವಾಗಿ, ಯಶಸ್ವಿಯಾಗುತ್ತವೆ. ಅದರ ಮೂಲಕ ಮಕ್ಕಳ ಮನೋಭಾವಗಳ ವಿಕಾಸಕ್ಕೆ ಪೂರಕವಾಗಿ ಅವರು ತಮ್ಮ ಸುತ್ತಲಿನ ವಿಚಾರಗಳ ಬಗ್ಗೆ ಆಲೋಚಿಸುವಂತೆ ಮಾಡುತ್ತವೆ. ●